R No KRNN 12

3-12-1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

# ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

– For Influential Publicity –

ಪ್ರಕಾಶಕರು: ಅರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರವಿರತ ಎಂ. ಎಸ್. ಕೃಷ್ಣರಾವ್ [3 ಕೆ.ಪಿ

# ವರಾಹ ಯೋಜನೆ ಕುರಿತು ಕಮ

ನವದೆಹಲಿ— ಮಾರುತಿ ಮೋಟಾರು ಸಂಸ್ಥೆಯಲ್ಲಿ ಬಿರ್ಲಾರು ಷೇರ್ ಪಡೆದಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯ್ತು.

ನಂ. ಸಿ. ಪಿ. ಆರ್ 35/74-75

ಪುರಸಭಾ ಕಛೇರಿ, ಮೈಸೂರು
ದಿನಾಂಕ : 18-11-1974

ಅಬ್‌ಸ್ಟ್ರಾಕ್ಟ್ ಟೆಂಡರ್

## ನೋಟಿಫಿಕೇಶನ್

ಈ ಮೂಲಕ ತಿಳಿಯಪಡಿಸುವುದೇನೆಂದರೆ 1975–1976 ನೇ ಸಾಲಿಗೆ (ಅಂದರೆ ತಾರೀಖು 1–2–1975 ರಿಂದ 31–1–1976ರ ಅಖೈರ್‌ವರೆಗೆ)ಮೈಸೂರುಪುರಸಭೆ ಅಡಳಿತಕ್ಕೆ ಒಳಪಟ್ಟ ಹೆಲ್ತ್ ಇಲಾಖೆ ಮತ್ತು ಸೂಯಜ್ ಫಾರಂ ಎತ್ತುಗಳಿಗೆ ಬೇಕಾಗುವ ಸುಮಾರು 450 ಕ್ವಿಂಟಾಲ್ ಹಸಿರಿನಾದ ಹುರುಳಿ ಮತ್ತು 15 ಕ್ವಿಂಟಾಲ್ ಉಪ್ಪನ್ನು ಸರಬರಾಜು ಮಾಡಲು ಸೀಲಾದ ಟೆಂಡರ್‌ಗಳನ್ನು ತಾ 13–12–1974 ನೇ ಶುಕ್ರವಾರದ ದಿವಸ ಮಧ್ಯಾಹ್ನ 4 ಘಂಟೆಯ ವರೆವಿಗೆ ಮುನಿಸಿಪಲ್ ಕಮೀಷನರ್‌ರವರಿಂದ ಸ್ವೀಕರಿಸಲಾಗುತ್ತೆ. ಅಪೇಕ್ಷೆಯುಳ್ಳವರು ಒಂದು ಸಾವಿರದ ಐದು ನೂರು (ರೂ. 1,500-00) ರೂಪಾಯಿ ಟೆಂಡರ್ ಡಿಪಾಜಿಟ್ಟನ್ನು ಎಕ್ಸ್‌ಟೆನ್ಷನ್ ಕೌಂಟರ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು. ಮೈಸೂರು, ನಗರ ಸಭೆಗೆ ಮಧ್ಯಾಹ್ನ 3 ಗಂಟೆಯೊಳಗೆ ಪಾವತಿ ಮಾಡಿದ ಸರ್ಟಿಫೈಡ್ ಚಲನ್ ಸಮೇತ, ತಮ್ಮ ಟೆಂಡರುಗಳನ್ನು ಕೊಡಬಹುದು. ಹೆಚ್ಚಿನ ವಿವರಗಳನ್ನು ಆಫೀಸ್ ವೇಳೆಯಲ್ಲಿ ಪಡೆಯಬಹುದು ಮತ್ತು ನೋಟೀಸ್ ಬೋರ್ಡಿನಲ್ಲಿ ಕಾಣಬಹುದು.

ಸಹಿ/– ಎಸ್. ಶ್ರೀನಿವಾಸರಾವ್,
ಮುನಿಸಿಪಲ್ ಕಮೀಷನರ್,
ಸಿಟಿ ಮುನಿಸಿಪಾಲಿಟಿ, ಮೈಸೂರು.

### ಬಹಿರಂಗ ವಿಚಾರಣೆ ನಡೆಯಲಿ

ನವದೆಹಲಿ — ಕಲ್ಲಿಸಾಗಾಣಿಕೆಗಾಗಿ ಬಂಧಿಸಲ್ಪಟ್ಟಿರುವವರ ವಿಚಾರಣೆ ಬಹಿರಂಗವಾಗಿ ನಡೆಯಲೆಂದು ಜನಸಂಘದ ನಾಯ ಶ್ರೀ ವಾಜಪೇಯಿಯವರು ಲೋಕಸಭೆಯಲ್ಲಿ ಹೇಳಿದರು — ಅವರಿಗೆ ಸರಕಾರದ ಮತ್ತು ರಾಜಕೀಯದ ಪೋಷಣೆ ಇಲ್ಲದಿದ್ದರೆ ಅವರು ಅಭಿವೃದ್ಧಿಗೊಳ್ಳುತ್ತಿರಲಿಲ್ಲ ವೆಂದು ಹೇಳಿದರು

★

### ಭಾರಿ ಯೋಜನೆ,

ಬೆಂಗಳೂರು— ನಗರಾಭಿವೃದ್ಧಿ ಮಂಡಲಿಯು ಭಾರಿ ವಸತಿ ನಿರ್ಮಾಣ ಪ್ರಾಜೆಕ್ಟನ್ನು ಸಿದ್ಧಪಡಿಸುವ ವಿಷಯವನ್ನು ಪತ್ರಿಕಾ ಗೋಷ್ಠಿಯಲ್ಲಿ ಮಂಡಲಿ ಅಧ್ಯಕ್ಷ ಶ್ರೀ ಬಿ. ಟಿ ಸೋಮಣ್ಣನವರು ವಿವರಿಸಿದರು – ಹಳೇ ಮದರಾಸು ರಸ್ತೆ ಮತ್ತು ಬಳ್ಳಾರಿ ರಸ್ತೆ ನಡುವ್ವದಲ್ಲಿ 50000 ನಿವೇಶನಗಳ ವಿಂಗಡನೆ ಸ್ಕೀಂ ತಯಾರಿಸಿರುವದೆಂದು ಹೇಜಕರಬಂಡೆ ಕಾವಲ್‌ನಲ್ಲಿ ಈ ಕಾರ್ಯಕ್ಕಾಗಿ 2000 ಎಕ್ರೆ ಭೂಮಿ ವಶಪಡಿಸಲಾಗುವುದೆಂದು ಹೇಳಿದರು – ನಿವೇಶನಗಳ ಬೆಲೆ ಹೆಚ್ಚಿಸಲಾಗುವುದನ್ನೂ ತಿಳಿಸಿದರು.

★ ಭದ್ರಾವತಿ – ಶ್ರೀ ಕೆಂಗಲ್ ಹನುಮಂತಯ್ಯ ಎಂ. ಪಿ ಯವರಿಗೆ ಇಲ್ಲಿ ಒಂದು ಸನ್ಮಾರಂಭದಲ್ಲಿ ಹಾಕಿದ ಹಾರಕ್ಕೆ ಹರಾಜಿನಲ್ಲಿ ರೂ 1111 ದೊರೆಯಿತು.

ಛತ್ರಿ
ರೇನ್ ಕೋಟುಗಳಿಗೆ

ಬ್ಯಾಂಕ್ ರೋಡ್ ಬಾಹು ಸಾರ್
A Firm known for
Genuine Good Business

### ಚಳುವಳಿ ವಿರುದ್ಧ

ನುದರಾಸು— ಬೀಹಾರಿನಲ್ಲಿಯ ಚಳುವಳಿ ಪ್ರತಿಭಟಿಸಿ ಕಾಂಗ್ರೆಸ್ ಪಾರ್ಟಿ ವಿದ್ಯಾರ್ಥಿಶಾಖೆಯು ಸೋಮವಾರ ಮೆರವಣಿಗೆ ನಡೆಸಿತು.

★

### ರಾಜ್ಯಗಳ ಹಳೇ ಬಾಕಿ

ನವದೆಹಲಿ— ರಾಜ್ಯಗಳು ಹಳೇ ಬಾಕಿ ಬೈಸಲ್ಮಾಡುವವರೆಗೆ ಹೊಸದಾಗಿ ಠಸಗೊಬ್ಬರ ಕೊಡುವುದಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

### ಫೈನಾನ್ಸ್ ಎಕ್ಸ್‌ಪೆಯರಿ ಸಮಿತಿ

ಮೈಸೂರು– ಪುರಸಭೆಗಳ ಹಣಕಾಸಿನ ವಿಚಾರಣಾ ಸಮಿತಿ ಇಲ್ಲಿಗೆ ತಾ|| 6 ರಂದು ಆಗಮಿಸುವರು; ಆ ಸುಧ್ಯಾಹ್ನ ನಡೆಯುವ ಸಭೆಯಲ್ಲಿ ಸಂಬಂಧಪಟ್ಟವರನ್ನು ಭೇಟಿ ಮಾಡಿ ಅವಶ್ಯ ಸಲಹೆ ಪಡೆಯುವರು.

★

### ಕೊಲೆ ಮೊಖದ್ದಮೆ

ಮೈಸೂರು— ಅಸ್ವತ್ಥಿಯಲ್ಲಿ ಮುರಣಗೊಂಡ ವಾಲಿಯ ತಂದೆ ಕೊಟ್ಟ ದೂರಿನ ಮೇಲೆ ಪೋಲೀಸರು ಕೊಲೆ ಮೊಖದ್ದಮೆ ರಿಜಿಸ್ಟರು ಮಾಡಿಕೊಂಡಿರುವರು – ವಾಲಿ ಮತ್ತು ಜವೆದ್‌ರ ನಿಧನ ಸಂಬಂಧದಲ್ಲಿ ಸ್ಥಾಪಿಸಲಾಗಿರುವ ಶೋಕ ಸಮಿತಿಯು, ಅವರ ನಿಧನ ಬಗ್ಗೆ ನ್ಯಾಯಾಂಗ ತನಿಖೆಗೂ, ಅವರ ಮನೆಯವರಿಗೆ ಪರಿಹಾರ ನೀಡಲೂ ಒತ್ತಾಯಮಾಡಿದೆ

★ ಪಟ್ನಾ— ಡಿಸೆಂಬರು ತಿಂಗಳು ಪೂರ್ತಿ ಇಲ್ಲಿ ಪ್ರತಿಬಂಧಕಾಜ್ಞೆ ಜಾರಿ ಮಾಡಲಾಗಿದೆ – ಇಲ್ಲೀವರೆಗೆ ಬೀಹಾರು ಪ್ರವೇಶಿಸುವದನ್ನು ಪ್ರತಿಬಂಧಿಸಿ 10 ಮಂದಿ ರಾಜಕೀಯ ನಾಯಕರ ಮೇಲೆ ಆಜ್ಞೆ ಹೊರಡಿಸಲಾಗಿದೆ

### ವರಾಹಾ ಪ್ರಾಜೆಕ್ಟ್

ಮಂಗಳೂರು— ವರಾಹಾ ಪ್ರಾಜೆಕ್ಟ್ಟಿನ ಕ್ಷೇತ್ರದಲ್ಲೀ ಕೈಗೊಳ್ಳಲಾಗುವುದೆಂದು ಲೋಕೋಪಯೋಗಿ ಮಂತ್ರಿ ಶ್ರೀ ಚನ್ನಬಸಪ್ಪನವರು ಹೇಳಿದರು – ಇದು ಪೂರ್ಣಗೊಂಡ ನಂತರ ವಿದ್ಯುಚ್ಛಕ್ತಿ ಉತ್ಪಾದನೆಯಲ್ಲದೆ, 60000 ಎಕ್ರೆ ಭೂಮಿಗೆ ನೀರಾವರಿ ಒದಗುವುದೆಂದೂ ಹೇಳಿದರು.

★

### ಚಕ್ರವರ್ತಿಯ ತ್ಯಾಗಬುದ್ಧಿ

ಅಡಿಸ್‌ಅಬಾಬಾ— ಇತೋಪಿಯಾದ ಪದಚ್ಯುತ ಚಕ್ರವರ್ತಿ ಹೈಲಿ ಸ್ಯಾಲಿ ತನ್ನ ಮತ್ತು ತನ್ನ ಸಂಸಾರದ ಎಲ್ಲಾ ಆಸ್ತಿಯನ್ನೂ ಅಲ್ಪಿಯ ಅಭಾವ ಎದುರಿಸುವ ನಿಧಿಗೆ ಕೊಟ್ಟಿರುವದಾಗಿ ಮಿಲಿಟರಿ ಆಡಳಿತಗಾರರು ಪ್ರಕಟಿಸಿರುವರು.

★

### ಕಾಂಗ್ರೆಸ್‌ಗೆ ಬಹುಮತ

ಮಂಡ್ಯ— ಪೌರಸಭಾ ಸದಸ್ಯ ಶ್ರೀ ಹೆಚ್. ಎಲ್. ದೇವಯ್ಯನವರು ಕಾಂಗ್ರೆಸ್ ಪಾರ್ಟಿಗೆ ಸೇರಿದರು – ಇದರಿಂದ ಪೌರ ಸಭೆಯಲ್ಲಿ ಕಾಂಗ್ರೆಸ್‌ಗೆ ಬಹುಮತ ದೊರೆಯಿತು.

★

### ಸಂಯುಕ್ತ ಬ್ಲಾಕ್

ಜಮ್ಮು— ಬೀಹಾರಿನಲ್ಲಿಯ ಚಳವಳಿಯಲ್ಲಿ ಭಾಗವಹಿಸುತ್ತಿರುವ ಎಲ್ಲಾ ಪಕ್ಷಗಳ ಸಂಯುಕ್ತ ಬ್ಲಾಕ್ ಸ್ಥಾಪಿಸಬೇಕೆಂಬ ಠರಾವನ್ನು ಜನಸಂಘದ ಕಾರ್ಯಕಾರಿ ಸಮಿತಿ ಅನುಮೋದಿಸಿದ್ದು, ಈ ಬಗ್ಗೆ ಇತರ ಪಕ್ಷಗಳೊಡನೆ ಪರ್ಯಾಲೋಚಿಸಲು ಶ್ರೀ ವಾಜಪೇಯಿಯವರು ಪ್ರಾರಂಭಿಸುವರು.

★

### ಹಸು ಕೊಡಲಾಯಿತು

ಕರ್ನೂಲು– ಪ್ರತಿಹಸುಗೆ ರೂ 1250 ಸಾಲದ ಮೇಲೆ ಲಡಗಿರಿ ಮತ್ತು ಪಕ್ಕದ ಗ್ರಾಮಗಳ ಇಪ್ಪತ್ತು ಸಣ್ಣ ರೈತರಿಗೆ ಒಂದೊಂದು ಹಸು ಕೊಡಲಾಯಿತು.

### ಚಳವಳಿ ಬಗ್ಗೆ ವ್ಯವಸ್ಥೆ

ಲಕ್ನೊ— ಉತ್ತರ ಪ್ರದೇಶದಲ್ಲಿ ಭ್ರಷ್ಟಾಚಾರ, ಬೆಲೆ ಏರಿಕೆ, ವಿದ್ಯಾಭ್ಯಾಸ ಸುಧಾರಣೆ ಬಗ್ಗೆ ಚಳವಳಿ ಹೂಡುವ ವಿಚಾರವಾಗಿ ಬಲಿಯಾದಲ್ಲಿ ಶ॥ 8 ಕಲ್ಲಿ ನಡೆಯುವ ಸಮ್ಮೇಳನದಲ್ಲಿ ವ್ಯವಸ್ಥೆ ಮಾಡಲಾಗುವುದು – ಸಮ್ಮೇಳನಕ್ಕೆ ಶ್ರೀ ಜಯ ಪ್ರಕಾಶ ನಾರಾಯಣರೂ ಆಗಮಿಸಲಿರುವರು.

### ಸರ್ವಜ್ಞ ವಾಣಿ

ಕೊಲುವ ಧರ್ಮವನೊಯ್ದು ಒಲೆಯೊಳಗೆ ಇಕ್ಕುವಾ
ಕೊಲಲಾಗದೆಂಬ ಜೈನನಾ ಮತವೆನ್ನ
ತಲೆಯ ಮೇಲಿರಲಿ ಸರ್ವಜ್ಞ.

### ಪಕ್ಷಿಗಳ ಕಳ್ಳ ಸಾಗಾಣಿಕೆ

ಆಸ್ಟ್ರೇಲಿಯಾದಿಂದ ಕಳವು ಮಿಲಿಯ ಡಾಲರುಗಳ ವ್ಯವಹಾರದಲ್ಲಿ ಅಪರೂಪವಾದ ಪಕ್ಷಿಗಳು ಹಾವುಗಳು ಮತ್ತಿತರ ಪ್ರಾಣಿಗಳ ಕಳ್ಳಸಾಗಾಣಿಕೆ ಸೇರಿದೆ.

### ಸಾದರ ಸ್ವೀಕಾರ

" ಸುರಜನ್ಮ ರಹಸ್ಯ '— ಅನೇಕ ವಿಷಯಗಳನ್ನೊಳಗೊಂಡಿರುವ, ವಿದ್ಯಾರಣ್ಯಪುರದ, 180 ಹೊಸ ಬ್ಲಾಕ್‌ನಲ್ಲಿರುವ ಶ್ರೀಗೌರಿಶಂಕರ ನಿಲಯದಲ್ಲಿನ, ದೈವಜ್ಞರು ಮತ್ತು ಗ್ರಂಥಕರ್ತರೂ ಆದ ಶ್ರೀ ಗಂಗಾಧರ ಶಾಸ್ತ್ರಿಗಳವರಿಂದ ರಚಿಸಲ್ಪಟ್ಟಿರುವ ಈ ಗ್ರಂಥವನ್ನು ಸಾದರದಿಂದ ಸ್ವೀಕರಿಸಿದ್ದೇವೆ.


ವುಡ್‌ಲಾಂಡ್ 29 11 74 ರಿಂದ

ಅಮೋಘ 4 ನೇ ವಾರ

ರಾಜೇಶ್ ಖನ್ನ, ಜೀನತ್ ಅಮಾನ್,
ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ
ಅಪೂರ್ವ ಈಸ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ – ಆರ್. ಡಿ. ಬರ್ಮನ್ ನಿರ್ದೇಶನ – ಶಕ್ತಿ ಸಾಮಂತ್

ದಿನ ೫ ಪ್ರದರ್ಶನಗಳು

ಅ ಪೆ ರಾ 29 11 74 ರಿಂದ

ಪಾತಾಳ ಭೈರವಿ

ಎನ್ ಟಿ ರಾಮರಾವ್ ರೇಲಂಗಿ ಗಿರಿಜ ಇವರ ಅಭಿನಯದಿಂದ ಕೂಡಿದ
ಅಮೋಘ ತೆಲುಗು ಚಿತ್ರ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Quality Printing Neat Binding

Lakshminarasimha Press

Sivarampet, Mysore 1

Protect the Cow

Help The Gorakshana

— Humanitarian Propoganda Monthly —

SHAKTI

SUDHA

A Superb Tonic


Contribute Liberally

to the National Defence Fund

Edited Printed and Published by Dharmapracharanirata M S. Krishna Rao ( Proprietor ) at the Satvavadi Press, Chamarajapuram Mysore